ಜೆಎಸ್‌ಎಸ್ ಮಹಾವಿದ್ಯಾಪೀಠ
# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
ESTD-1964 (ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
**ಬಿ.ಎನ್. ರಸ್ತೆ, ಮೈಸೂರು – ೫೭೦ ೦೨೫**

☎: 0821-2548236 & 2548380 Fax: 0821-2548238 E-mail: jssautonomous@gmail.com www. jsscacs.edu.in

ದಿನಾಂಕ: ೧೬.೦೨.೨೦೧೮

## "ಕನ್ನಡದ ಶಾಸ್ತ್ರೀಯತೆಗೆ ಕರಡಚ್ಚು ತಿದ್ದುಪಡಿ ಜ್ಞಾನ ಅತ್ಯವಶ್ಯಕ"
–ಶ್ರೀ ಈಚನೂರು ಕುಮಾರ್

**ಜೆಎಸ್‌ಎಸ್ ಕನ್ನಡ ಸ್ನಾತಕೋತ್ತರ ವಿಭಾಗದಿಂದ**
**'ಪುಸ್ತಕ ಪ್ರಕಾಶನ ಮತ್ತು ಕರಡಚ್ಚು ತಿದ್ದುಪಡಿ : ಕಮ್ಮಟ'**

"ಪಾಶ್ಚಾತ್ಯರು ಶ್ರಮಪಟ್ಟು ಅಧ್ಯಯನ ಮಾಡಿ ಕನ್ನಡವನ್ನು ಶಾಸ್ತ್ರೀಯವಾಗಿ ಬಳಸಿದರು. ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯ ಕುಡಿಗಳಾದ ನಾವು ಕನ್ನಡವನ್ನು ತಪ್ಪಿಲ್ಲದೆ ಬರೆಯಬೇಕು. ಅದಕ್ಕೆ ಕರಡಚ್ಚು ತಿದ್ದುಪಡಿಯ ಜ್ಞಾನ ಪ್ರತಿಯೊಬ್ಬ ವಿದ್ಯಾವಂತನಿಗೂ ಅತ್ಯವಶ್ಯಕ. ತಂತ್ರಜ್ಞಾನದ ಯುಗದಲ್ಲಿಯೂ ಅದಕ್ಕೆ ಹೆಚ್ಚು ಮಹತ್ವವಿದೆ. ಗಣಕಯಂತ್ರದಲ್ಲಿ ಕೇವಲ ವ್ಯಾಕರಣದೋಷವನ್ನು ತಿದ್ದಬಹುದೇ ಹೊರತು ಬರೆಹದ ಶೈಲಿಯನ್ನು ಬರಹಗಾರ ಇಲ್ಲವೆ ಕರಡಚ್ಚು ತಿದ್ದುವವನು ಮಾತ್ರ ಬದಲಾಯಿಸಲು ಸಾಧ್ಯ" ಎಂದು ಪತ್ರಕರ್ತರಾದ ಶ್ರೀ ಈಚನೂರು ಕುಮಾರ್ ಹೇಳಿದರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗವು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಜಾಣ ಜಾಣೆಯರ ಬಳಗದ ವತಿಯಿಂದ ಕನ್ನಡ ಎಂ.ಎ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ 'ಪುಸ್ತಕ ಪ್ರಕಾಶನ ಮತ್ತು ಕರಡಚ್ಚು ತಿದ್ದುವಿಕೆ' ಎಂಬ ಒಂದು ದಿನದ ಕಮ್ಮಟವನ್ನು ಶ್ರೀ ಈಚನೂರು ಕುಮಾರ್ ಅವರು ನಡೆಸಿಕೊಟ್ಟರು. ಕಮ್ಮಟದಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ ಕರಡಚ್ಚು ತಿದ್ದುಗಾರನಿಗೆ ಇರಬೇಕಾದ ಸೂಕ್ಷ್ಮತೆ, ತಾಳ್ಮೆ, ಭಾಷಾ ತಜ್ಞತೆ ಮತ್ತು ವಿಷಯ ಜ್ಞಾತಿಗಳ ಬಗೆಗೆ ಪ್ರಾಯೋಗಿಕವಾಗಿ ವಿವರಿಸಿ ಕರಡಚ್ಚು ತಿದ್ದುವಿಕೆಯ ಮಹತ್ವವನ್ನು ತಿಳಿಸಿಕೊಟ್ಟರು. ಕಮ್ಮಟದಲ್ಲಿ ಪಾಲ್ಗೊಂಡ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ತಜ್ಞರೊಂದಿಗೆ ಸಂವಾದದ ಮುಖಾಂತರ ವಿಚಾರ ಮಂಥನ ನಡೆಸಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಭಾರ ಪ್ರಾಂಶುಪಾಲರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ಉಪಸ್ಥಿತರಿದ್ದರು. ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ಡಾ. ಎಚ್.ಟಿ. ಶೈಲಜರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಭಾಗದ ಪ್ರಾಧ್ಯಾಪಕರುಗಳಾದ ಡಾ.ಬಿ.ಪ್ರಭುಸ್ವಾಮಿ ಮತ್ತು ಡಾ. ಬಿ.ಎಸ್. ಸುದೀಪ್‌ರವರು ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ ಜಾಣೆಯರ ಬಳಗದ ವಿದ್ಯಾರ್ಥಿನಿ ಕು.ಎಸ್. ನಂದಿನಿ ಪ್ರಾರ್ಥಿಸಿದರು. ಶ್ರೀ ಬಿ. ಗಿರೀಶ ಸ್ವಾಗತಿಸಿದರು. ಶ್ರೀ. ಎಚ್.ಸಿ ವಿನಯಕುಮಾರ್ ನಿರೂಪಿಸಿದರು.

ಗೆ,

ಸಂಪಾದಕರು

________________

________________

ಪ್ರಾಂಶುಪಾಲರು
16/2/18